ಇದಕ್ಕೆ ಮಂಜ್ಯಿ ಕಾರಣ ತೆರಿಗೆ ಹಣವನ್ನು ಕಾಲಕ್ಕೆ ಸರಿಯಾಗಿ ವಸೂಲಿ ಮಾಡುತ್ತಿಲ್ಲ. ಬಳ್ಳಾರಿಯಲ್ಲಿ ೯ ಲಕ್ಷ ರೂ. ಗಳ ಪೈಕಿ ೬ ಲಕ್ಷರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ. ಇನ್ನೂ ೩ ಲಕ್ಷ ರೂ. ಗಳು ಬಾಕಿ ಇದು ಹಳೆಯ ದರದ ಪ್ರಕಾರ ಆದರೆ ಹೊಸ ದರದ ಪ್ರಕಾರ ೨೭ ಲಕ್ಷ ರೂ. ಗಳನ್ನು ಕಲೆಕ್ಟ್ ಮಾಡ ಬೇಕಾಗಿದೆ. ಆದರೆ ಈ ಬಗ್ಗೆ ಕೆಲವರು ಕೋರ್ಟಿಗೆ ಹೋಗಿದ್ದಾರೆ. ಪಾಟರ್-ರೇಟ್‌ನ್ನು ಹೆಚ್ಚು ಮಾಡಿದಾಗ ಆದರ ವಿರುದ್ಧ ಕೆಲವರು ಕೋರ್ಟಿಗೆ ಹೋಗಿದ್ದಾರೆ. ಈಗ ಸರ್ಕಾರದಿಂದ ಆಕ್ಟ್ರಾಯ್ ಬದಲಿಗೆ ಪರಿಹಾರ ಕೊಟ್ಟಿರುವುದರ ಜೊತೆಗೆ ಹೋದವರ್ಷ ಹನ್ನೆರಡೂವರೆ ಲಕ್ಷ ರೂ ಗಳನ್ನು ಡೆವಲಪ್ ಮೆಂಟ್ ಗ್ರಾಂಟ್ಸ್ ಎಂದು ಕೊಟ್ಟಿದ್ದೇವೆ. ಇನ್ವೆಸ್ಟಾಲ್‌ಮೆಂಟ್ ಬೇಸಿಸ್ ಮೇಲೆ ಪ್ರತಿ ತಿಂಗಳೂ ೨೦ ಸಾವಿರ ರೂ. ಗಳನ್ನು ಕಟ್ಟಿದ್ದಿದ್ದರೆ ವಿದ್ಯುತ್ ಬಂದ್ ಮಾಡುತ್ತಾರೆಂದು ತಿಳಿದಿದ್ದರೂ ಸಹ ಕಟ್ಟಿಲ್ಲ. ಅಧಿಕಾರಿಗಳ ಒಂದು ತಪ್ಪಿನಿಂದಾಗಿ ಅಲ್ಲಿನ ಜನರು ಕತ್ತಲಲ್ಲಿ ಓಡಾಡುವ ಒಂದು ಪರಿಸ್ಥಿತಿ ನಿರ್ಮಾಣ ವಾಯಿತು. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ವಿಚಾರ ಮಾಡುತ್ತಿದ್ದೇವೆ ಮತ್ತು ಅವರ ಮೇಲೆ ಕ್ರಮ ಕೈಕೊಳ್ಳುತ್ತಿದ್ದೇವೆ. ಒಟ್ಟಾಗಿ ಹೇಳಬೇಕಾದರೆ ಇವೊತ್ತಿನದಿವಸ...

MR. SPEAKER.—Their salary should be he ld up for two months. They can't keep the city in darkness.

ಶ್ರೀ ಧರ್ಮಸಿಂಗ್.—ಈ ವಿಷಯ ನನ್ನ ಗಮನಕ್ಕೆ ಬಂದಮೇಲೆ ನಾನು ಛೇರ್ಮನ್ನರ ಜೊತೆಯಲ್ಲಿ ಮಾತನಾಡಿದ್ದೇನೆ. ೨೪ನೇ ತಾರೀಖಿನ ದಿವಸ ಪತ್ರ ಬರೆದಿದ್ದೇನೆ ೩೧ ಮುನಿಸಿಪಾಲಿಟಿಗಳಿಗೆ ಇಮ್ಮಿಡಿ ಯೇಟಾಗಿ ಡಿಸ್‌ಕನೆಕ್ಟ್ ಮಾಡಬಾರದು ಎಂದು ಹೇಳಿದ್ದೇವೆ. ಮಾನ್ಯ ಸದಸ್ಯರು ಬಳ್ಳಾರಿ ಟೈನ್‌ನಲ್ಲಿ ಬಗ್ಗೆ ಕಳವಳವನ್ನು ಏನು ವ್ಯಕ್ತಪಡಿಸಿದ್ದಾರೋ ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

PRESENTATION OF REPORTS

SRI C. M. ARUMUGHAM.—Sir, I present the Fourth Report (Sixt Assembly) of the Committee on the welfare of Scheduled Castes and Scheduled Tribes regarding Reservation and Employment of SCs/STs in Public Sector Undertakings/Boards, Government Companies and other Statutory Bodies.

SRI B. BASAVALINGAPPA —I present the Fifth Report (VI Assembly) on the Appropriation and Finance Accounts of the Government of Karnataka for the year 1975-76 to 1978-79(both inclusive) and the Reports of the Comptroller and Auditor General for the above years both Civil and Revenue Receipts relating to Home Department.

MR. SPEAKER.—Reports presented.

FINANCIAL BUSINESS

Disoussion on Voting of Demands for grants

ಶ್ರೀ ಎಂ. ವಿ. ರಾಜಶೇಖರನ್.—ಜನರಲ್ ಅಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾನ ಮುಂಜ್ಯಿ ಮಂತ್ರಿಗಳ ಖಾತೆಗೆ ಸಂಬಂಧಪಟ್ಟ ಹಲವಾರು ಇಲಾಖೆಗಳಿವೆ, ಅವುಗಳ ಬಗ್ಗೆ ಮಾತ ನಾಡಬೇಕಾಗಿದೆ. ತಾವು ೪ ಗಂಟೆಗೆ ಚರ್ಚೆ ಸೀಮಿತಮಾಡಿದರೆ ಕಷ್ಟವಾಗಂತ್ತದೆ. ೧೬ ಜನರಿಗೆ ೪ ಗಂಟೆ ಕಾಲ ಹಂಚಿದರೆ ಕಷ್ಟವಾಗುತ್ತದೆ. ತಮ್ಮಲ್ಲಿ ನನ್ನ ಸಬ್ಮಿಷನ್ ಏನೆಂದರೆ, ಈ ಒಂದು ಸೆಷನ್‌ನಲ್ಲಿ ಕಾರ್ಯ ಕಲಾಪಗಳಲ್ಲಿ ಭಾಗವಹಿಸುವುದಕ್ಕೆ ನಮ್ಮನ್ನೆಲ್ಲಾ ಹೊರಗೆ ಹಾಕಿದ್ದರಿಂದ ಆಗಲಿಲ್ಲ. ಆದುದರಿಂದ